**ರಾಜನ್ – ನಾಗೇಂದ್ರ ಅವರ ಜೋಡಿ ನಾಲ್ಕು ದಶಕಗಳ ಕಾಲ ಚಿತ್ರಸಂಗೀತ ಜಗತ್ತಿನಲ್ಲಿ ಮಾಡಿದ ಮೋಡಿ ಅಸಾಧಾರಣವಾದದ್ದು. ಕಳೆದ ವಾರ (ಅ. 12ರಂದು) ತಮ್ಮ 85ನೇ ವಯಸ್ಸಿನಲ್ಲಿ ರಾಜನ್ ಇಹಲೋಕದ ಸಂಗೀತಯಾತ್ರೆ ಮುಗಿಸಿದ್ದಾರೆ. ಅವರು ತಮ್ಮ ಸಹೋದರ ನಾಗೇಂದ್ರ ಅವರ ಜೊತೆಗೂಡಿ ಬಿತ್ತಿದ ಹಾಡುಗಳು ಮಾತ್ರ ಅನಂತ ಅಭಿಮಾನಿಗಳ ಎದೆಯಲ್ಲಿ ಅನುದಿನ ಮೊಳೆಯುತ್ತಲೇ ಇವೆ.**

■ ಪದ್ಮನಾಭ ಭಟ್



**ಇಹಲೋಕದ ಯಾತ್ರೆ ಮುಗಿಸಿದ ರಾಜನ್**

# ಪಲ್ಲವಿಯ ಹುಡುಕಿ ಹೊರಟ ಚರಣ

80 ದಶಕವನ್ನು ಕನ್ನಡ ಚಿತ್ರರಂಗದ ಸುವರ್ಣ ಕಾಲ ಎಂದೇ ಗುರ್ತಿಸಲಾಗುತ್ತದೆ. ಇದರ ಸತ್ಯಾಸತ್ಯದ ಬಗ್ಗೆ ಚರ್ಚೆ ಮಾಡಬಹುದು. ಆದರೆ ಅರವತ್ತರಿಂದ ತೊಂಬತ್ತರ ದಶಕದ ತನಕದ ಕಾಲ ಕನ್ನಡ ಚಿತ್ರಸಂಗೀತದ ಪಾಲಿನ ಸುವರ್ಣ ಯುಗ ಎಂಬುದನ್ನು ಮಾತ್ರ ಯಾವುದೇ ಚರ್ಚೆ ಇಲ್ಲದೆ ಒಪ್ಪಿಕೊಳ್ಳಲೇಬೇಕು. ಯಾಕೆಂದರೆ ಅಂದಿನ ಹಾಡಿನ ಸಾಲುಗಳು ಇಂದೂ ನಮ್ಮ ದೈನಂದಿನ ಭಾಗವಾಗಿವೆ.

ಆ ನಾಲ್ಕು ದಶಕದ ಚಿತ್ರಸಂಗೀತದ ಸುವರ್ಣ ಕಾಲದ ಮುಂಚೂಣಿಯಲ್ಲಿದ್ದವರಲ್ಲಿ ಸಂಗೀತ ಸಂಯೋಜಕರಾದ ರಾಜನ್–ನಾಗೇಂದ್ರ ಸಹೋದರರು ಪ್ರಮುಖರು. ಅವರ ಸಂಗೀತ ಪ್ರಯಾಣವನ್ನು ಗಮನಿಸಿದರೆ, ನಡೆದುಕೊಂಡು ಹೋದಲ್ಲೆಲ್ಲ ಹಾಡುಗಳನ್ನು ಬಿತ್ತುತ್ತ ಹೋದಂತೆ, ಕೊನೆಗೆ ಆ ವಿಹಾರ ಸ್ಥಳವೇ ಒಂದು ಹಾಡುತೋಟವಾಗಿ ನಳನಳಿಸಿದಂತೆ ಭಾಸವಾಗುತ್ತದೆ.

ಆಕಾಶವೆ ಬೀಳಲಿ ಮೇಲೆ ನಾನೆಂದು ನಿನ್ನವನು (ನ್ಯಾಯವೇ ದೇವರು), ಆಕಾಶದಿಂದ ಧರೆಗಿಳಿದ ರಂಭೆ (ಚಂದನದಗೊಂಬೆ), ಬಾನಲ್ಲು ನೀನೆ ಬುವಿಯಲ್ಲೂ ನೀನೆ (ಬಯಲು ದಾರಿ), ಬಂದೆಯ ಬಾಳಿನ ಬೆಳಕಾಗಿ (ಅವಳ ಹೆಜ್ಜೆ), ಚೆಲುವೆಯ ಅಂದದ ಮೊಗಕೆ (ದೇವರ ಗುಡಿ), ಎಂದೆಂದೂ ನಿನ್ನನು ಮರೆತು ಬದುಕಿರಲಾರೆ (ಎರಡು ಕನಸು), ನಲಿವಾ ಗುಲಾಬಿ ಹೂವೆ (ಆಟೊ ರಾಜ) – ಹೀಗೆ ಈ ಹಾಡುತೋಟದಲ್ಲಿ ಇಂದಿಗೂ ಜೀವಂತ ನಳನಳಿಸುತ್ತಲೇ ಇರುವ ಹಾಡು ಹೂಗಳ ಸರತಿ ತುಂಬ ದೊಡ್ಡದಿದೆ.

ಆಕಾಶವಾಣಿಯಲ್ಲಿ ಚಿತ್ರಗೀತೆಗಳ ಸಮಯದಲ್ಲಿ ನಿರೂಪಕರು ಹೇಳುವ 'ಸಂಗೀತ ಸಂಯೋಜನೆ ರಾಜನ್–ನಾಗೇಂದ್ರ' ಎಂಬ ಉದ್ಘೋಷಣೆಯ ನಂತರ ಬರುವ ಮಧುರ ಗೀತೆಗಳಿಗಾಗಿ ಕಿವಿನಿಮಿರಿಸಿ ಕಾಯುವ ಬಹುದೊಡ್ಡ ಬಳಗವೇ ಇತ್ತು. ಈ ಸಹೋದರರು ಎಷ್ಟು ಅವಿಚ್ಛಿನ್ನವಾಗಿ ಜನರಿಗೆ ಪರಿಚಿತರಾಗಿದ್ದರು ಎಂದರೆ, ಇವರು ಇಬ್ಬರು ಎಂದು ಎಷ್ಟೋ ಜನರಿಗೆ ಇವತ್ತಿಗೂ ಗೊತ್ತಿಲ್ಲ.

ಮೈಸೂರಿನಲ್ಲಿ ಹುಟ್ಟಿ, ಆರ್ಕೆಸ್ಟ್ರಾ ಮೂಲಕ ಹೆಸರು ಮಾಡಿ ನಂತರ 'ಸೌಭಾಗ್ಯ ಲಕ್ಷ್ಮಿ' ಸಿನಿಮಾದ ಮೂಲಕ 1952ರಲ್ಲಿ ಸಂಗೀತ ನಿರ್ದೇಶಕರಾಗಿ ಚಿತ್ರರಂಗದಲ್ಲಿ ಮೊದಲ ಸಹಿ ಹಾಕಿದರು. ಅಲ್ಲಿಂದ ಮುಂದೆ ಅವರ ಪ್ರತಿ ಸಿನಿಮಾಗಳೂ, ಅದರಲ್ಲಿನ ಪ್ರತಿ ಹಾಡುಗಳೂ ಅವರ ಸಹಿಗಳಾಗಿಯೇ ಜೀವತಳೆದವು.

ಈ ಸಹೋದರರಲ್ಲಿ ರಾಜನ್ ಹಿರಿಯರು (ಜನನ 1933). ತಂದೆ ಮೂಕಿ ಚಿತ್ರಗಳಿಗೆ ಹಾರ್ಮೋನಿಯಂ ಮತ್ತು ಕೊಳಲು ವಾದನ ಮಾಡುತ್ತಿದ್ದರು. ಹೀಗಾಗಿ ಹಿನ್ನೆಲೆ ಸಂಗೀತವನ್ನು ಕೇಳಿಕೊಂಡೇ ಬೆಳೆದ ರಾಜನ್ ಬಹುಬೇಗ ಸಂಗೀತದ ಕಡೆಗೆ ಆಕರ್ಷಿತರಾದರು. ಆರಂಭಿಕ ದಿನಗಳಲ್ಲಿ ಅವರಿಗೆ ಒಲಿದ ವಾದ್ಯ ವಯಲಿನ್. ಮೈಸೂರಿನ ಚೌಡಯ್ಯ ರಾಮಮಂದಿರದಲ್ಲಿ ನಡೆಯುತ್ತಿದ್ದ ಸಂಗೀತ ಕಾರ್ಯಕ್ರಮಗಳಿಗೆ ರಾಜನ್ ತಪ್ಪದೇ ಹೋಗುತ್ತಿದ್ದರು. ಅಲ್ಲಿ ಕರ್ನಾಟಿಕ್, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಹಲವು ಅವಿಸ್ಮರಣೀಯ ಕಛೇರಿಗಳನ್ನು ಆಲಿಸುವ ಭಾಗ್ಯ ಅವರದಾಯಿತು. ಹಾಗೆಯೇ ಮೈಸೂರು ಅರಮನೆಯಲ್ಲಿ



ನಿರ್ದೇಶಕ ರಾಜನ್ ಅವರೊಂದಿಗೆ ಪತ್ರಕರ್ತ ಸುರೇಶ್‌ಚಂದ್ರ ಹಾಗೂ ಸಂಗೀತ ನಿರ್ದೇಶಕ ಆರ್ ರತ್ನಂ